RNU AIR DHARWAD

NOVEMBER 19, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಇಂದು, ಮಹಿಳಾ ಉದ್ಯಮಶೀಲತಾ ದಿನಾಚರಣೆ. ಉದ್ಯಮ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆಯನ್ನು ಗೌರವಿಸುವುದು, ಅವರನ್ನು ಸಬಲೀಕರಿಸುವುದು, ಅವರ ಸವಾಲುಗಳ ಬಗ್ಗೆ, ಜನ ಜಾಗೃತಿ ಮೂಡಿಸುವುದು, ಈ ದಿನಾಚರಣೆಯ, ಮುಖ್ಯ ಉದ್ದೇಶ. ಮಹಿಳೆಯರು ಮತ್ತು ಯುವತಿಯರನ್ನು, ಆರ್ಥಿಕವಾಗಿ ಸಬಲರನ್ನಾಗಿಸುವುದು, ಜಾಗತಿಕ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುವುದು ಮತ್ತು ಬಡತನದ ನಿರ್ಮೂಲನೆಯ ಗುರಿ, ಹೊಂದಿದೆ.

<><><>

ದಕ್ಷಿಣಕನ್ನಡ ಜಿಲ್ಲೆ, ಮೂಡುಬಿದಿರೆಯ, ನವೋದ್ಯಮಿ ಅನುಷಾ ಪ್ರಜ್ವಲ್ ಆಚಾರ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಅನುಷಾ ಪ್ರಜ್ವಲ ಮೂಡುಬಿದಿರೆ ಧ್ವನಿ 45 ಸೆಕೆಂದುಗಳು

<><><>

ಝಾನ್ಸಿ ರಾಣಿ, ಲಕ್ಷ್ಮೀಬಾಯಿ ಅವರ, ಜಯಂತ್ಯುತ್ಸವ ಇಂದು. ಭಾರತ ಸ್ವಾತಂತ್ರ್ಯ ಸಂಗ್ರಾಮದ, ಅಮರ ಚೇತನಕ್ಕೆ, ಶ್ರದ್ಧಾ ಸುಮನ ಅರ್ಪಿಸಲಾಗುತ್ತಿದೆ.

<><><>

ಕೆನರಾ ಬ್ಯಾಂಕ್ ಕಟ್ಟಿದ, ನಾಡಿನ ಸಮಾಜ ಸುಧಾರಕರಲ್ಲಿ ಒಬ್ಬರಾದ, ಅಮ್ಮೆಂಬಳ ಸುಬ್ಬರಾವ ಪೈ, 1852ರ ನವೆಂಬರ್ 19 ರಂದು, ಮಂಗಳೂರು ಸಮೀಪದ ಮೂಲ್ಕಿಯಲ್ಲಿ ಜನಿಸಿದರು. ಅವರು ವಕೀಲ ಹಾಗೂ ಶಿಕ್ಷಣವೇತ್ತರಾಗಿ, ಹೆಸರುವಾಸಿ.

<><><>

ಹರ್ಷ/ವಿವಿಧ ಮೂಲಗಳಿಂದ

<><><>

ನಾಗರಿಕ ಸೇವಾ ಕೇಂದ್ರಗಳ ಹೆಸರಿನಲ್ಲಿ, ಏಕರೂಪತೆ ತರುವ ಉದ್ದೇಶದಿಂದ, ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ಅಡಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳನ್ನು, ಪ್ರಜಾ ಸೇವಾ ಕೇಂದ್ರಗಳೆಂದು, ಮರು ನಾಮಕರಣ ಮಾಡಿ, ರಾಜ್ಯ ಸರ್ಕಾರ ಆದೇಶಿಸಿದೆ.

<><><>

ರಾಜ್ಯದಲ್ಲಿ ನವೋದ್ಯಮ ಉತ್ತೇಜಿಸಲು, ಹುಬ್ಬಳ್ಳಿ–ಧಾರವಾಡದಲ್ಲಿ, 200 ಎಕರೆ ಜಾಗೆಯಲ್ಲಿ, ನವೋದ್ಯಮ ಪಾರ್ಕ್ ಸ್ಥಾಪನೆಯಾಗಲಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ, ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ, ರಾಜ್ಯದ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಮೂರು ದಿನಗಳ ಕಾಲ ಆಯೋಜಿಸಿರುವ, ಟೆಕ್ ಸಮ್ಮಿಟ್‌ನಲ್ಲಿ, ತಂತ್ರಜ್ಞಾನದ ಹೊಸ ಸೃಷ್ಟಿಗಳನ್ನು ಸಚಿವರು ವೀಕ್ಷಿಸಿದರು.

<><><>

ಶಿಕ್ಷಣ ಹಕ್ಕು ಕಾಯ್ದೆ – ಆರ್.ಟಿ.ಇ. ಅಡಿ, ಮಕ್ಕಳ ಹೆಸರು ನೋಂದಾಯಿಸಲು ಬಯಸುವ, ಪೋಷಕರ ಆದಾಯದ ಮಿತಿಯನ್ನು, ಮೂರೂವರೆ ಲಕ್ಷದಿಂದ, ವಾರ್ಷಿಕ 8 ಲಕ್ಷ ರೂಪಾಯಿಗೆ ಹೆಚ್ಚಿಸಿ, ಶಾಲಾ ಶಿಕ್ಷಣ ಇಲಾಖೆ, ಆದೇಶಿಸಿದೆ. ಆರ್.ಟಿ.ಇ. ಕಾಯ್ದೆ ಅಡಿ, ಖಾಸಗಿ ಶಾಲೆಗಳಲ್ಲಿ, ಶೇಕಡ 25 ರಷ್ಟು ಸೀಟುಗಳನ್ನು, ಆರ್ಥಿಕವಾಗಿ ಹಿಂದುಳಿದ ಮತ್ತು ದುರ್ಬಲ ವರ್ಗದ ಮಕ್ಕಳಿಗೆ, ಮೀಸಲಿಡುವುದು ಕಡ್ಡಾಯ. ಈ ಮಕ್ಕಳ ಶುಲ್ಕವನ್ನು ಸರ್ಕಾರವೇ ಭರಿಸುತ್ತದೆ.

<><><>

ಆರೋಗ್ಯ ಇಲಾಖೆ ಹಾಗೂ ರಾಜ್ಯ ಏಡ್ಸ್ ತಡೆಗಟ್ಟುವಿಕೆ ಸೊಸಾಯಿಟಿ ಸಹಯೋಗದಲ್ಲಿ, 25ನೇ ತಾರೀಖು, ರಾಜ್ಯದ ಎಲ್ಲ ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಲ್ಲಿ, ರಕ್ತದಾನ ಶಿಬಿರ ನಡೆಯಲಿದೆ ಎಂದು, ಸಚಿವ ಯು.ಟಿ. ಖಾದರ್ ಮಂಗಳೂರಿನಲ್ಲಿ ಹೇಳಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಫಿಲಿಪ್ಪೀನ್ಸ್‌ನ ಮನಿಲಾ ಪ್ರವಾಸದಲ್ಲಿ, ಬೀದರಿನ ಪ್ರಸಿದ್ಧ ಬಿದರಿ ಕಲೆಗಳ ಹೂದಾನಿಗಳನ್ನು ಜಾಗತಿಕ ನಾಯಕರಿಗೆ ಕಾಣಿಕೆಯಾಗಿ ನೀಡಿದ್ದಾರೆ. ಬೀದರಿ ಕಲೆಯ ಬೆಳ್ಳಿ ಕುಸುರಿಯ ಹೂ ದಾನಿಗಳನ್ನು, ಮ್ಯಾನ್ಮಾರ್ ಮತ್ತು ಬ್ರೂನೈ ದೇಶದ ನಾಯಕರು ಸ್ವೀಕರಿಸಿದರು. ಸತು ಮತ್ತು ತಾಮ್ರದ ಮಿಶ್ರ ಲೋಹದಿಂದ ತಯಾರಿಸಲಾಗುವ, ಬೀದರಿ ಹೂದಾನಿ ಕಲೆಗೆ, ಭೌಗೋಳಿಕ ಸೂಚ್ಯಂಕ – ಜಿ.ಐ.ಟ್ಯಾಗ್ ಲಭಿಸಿದೆ.

<><><>

ಉತ್ತರಕನ್ನಡ ಜಿಲ್ಲೆ, ಯಲ್ಲಾಪುರ ತಾಲೂಕಿನ, ಆರತಿ ಬೈಲ್ ಬಳಿ, ರಸ್ತೆ ಪಕ್ಕ ಕಪ್ಪು ಚಿರತೆ ಮೃತಪಟ್ಟಿದೆ. ಅಪಘಾತ ಈ ಸಾವಿಗೆ ಕಾರಣವಾಗಿರಬಹುದು ಎಂದು, ಯಲ್ಲಾಪುರ ಅರಣ್ಯ ವಿಭಾಗದ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಂಕೆ ವ್ಯಕ್ತ ಪಡಿಸಿದ್ದಾರೆ. ಮರಣೋತ್ತರ ಪರೀಕ್ಷೆ ಕೈಗೊಳ್ಳಲಾಗಿದೆ.

<><><>

ಹಕ್ಕಿಜ್ವರದ ಅತ್ಯಂತ ರೋಗಕಾರಕ ಪ್ರಭೇದ, H5 N1 ಸೋಂಕಿನ ವಿರುದ್ಧ ಅಭಿವೃದ್ಧಿಪಡಿಸಲಾಗಿರುವ, ಮೊದಲ ಸ್ವದೇಶಿ ಲಸಿಕೆಯನ್ನು, ನಾಳೆ, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವ, ಶಿವರಾಜಸಿಂಗ್ ಚೌವ್ಹಾಣ್ ಬಿಡುಗಡೆ ಮಾಡಲಿದ್ದಾರೆ. ಲಸಿಕೆಯನ್ನು, ಮಧ್ಯಪ್ರದೇಶದ ಭೋಪಾಲದಲ್ಲಿರುವ, ಭಾರತೀಯ ಕೃಷಿ ಸಂಶೋಧನಾ ಮಂಡಳಿ ಅಡಿಯಲ್ಲಿ ಕಾರ್ಯನಿರ್ವಹಿಸುವ, ಅಧಿಕ ಸುರಕ್ಷೆಯ ಪಶು ರೋಗಗಳ ಸಂಸ್ಥೆ – NIHSAD ಅಭಿವೃದ್ಧಿ ಪಡಿಸಿದೆ. ಕೋಳಿ ಸಾಕಣೆ ಕೇಂದ್ರಗಳ ಮೇಲೆ ಪರಿಣಾಮ ಬೀರಬಲ್ಲ, ಗಂಭೀರ ರೋಗವಾಗಿದೆ ಎಂದರು.

<><><>

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ, ಡಾಕ್ಟರ್ ಡಿ. ವೀರೇಂದ್ರ ಹೆಗ್ಗಡೆ ಅವರ, 79ನೇ ಜನ್ಮ ದಿನದ ಅಂಗವಾಗಿ, ಧಾರವಾಡದ ವಿದ್ಯಾಗಿರಿಯ, ಆರ್.ಎಸ್. ಹುಕ್ಕೇರಿಕರ ಪದವಿಪೂರ್ವ ಮಹಾವಿದ್ಯಾಲಯದ ಆವರಣದಲ್ಲಿ, ಇಂದಿನಿಂದ 21ನೇ ತಾರೀಖಿನ ವರೆಗೆ, ಪುರುಷ ಹಾಗೂ ಮಹಿಳೆಯರ ಕುಸ್ತಿ ಪಂದ್ಯಾವಳಿಗಳು, ನಡೆಯಲಿವೆ. ಜೆ.ಎಸ್.ಎಸ್. ಕಾರ್ಯದರ್ಶಿ, ಡಾಕ್ಟರ್ ಅಜಿತ ಪ್ರಸಾದ

ಮಾಹಿತಿ ನೀಡಿ, ಪದವಿಪೂರ್ವ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಆಯೋಜಿತ, ಕುಸ್ತಿ ಪಂದ್ಯಾವಳಿಯಲ್ಲಿ, 900ಕ್ಕೂ ಹೆಚ್ಚು ಕುಸ್ತಿಪಟುಗಳು ಪಾಲ್ಗೊಳ್ಳಲಿದ್ದು, ಎರಡು ಅಂಕಣಗಳಲ್ಲಿ ಸ್ಪರ್ಧೆ ನಡೆಯಲಿದೆ. 2 ಸಾವಿರ ಜನ ಕುಸ್ತಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ, ಎಂದರು.

<><><>

ಆಕಾಶವಾಣಿ, 30 ವರ್ಷದೊಳಗಿನ ಯುವ ಕಲಾವಿದರಿಗೆ, 'ಎ.ಐ.ಆರ್. ರೈಸಿಂಗ್ ಸ್ಟಾರ್ಸ್' ಎಂಬ, ರಾಷ್ಟ್ರವ್ಯಾಪಿ ವಿಶೇಷ ಸಂಗೀತ ಕಛೇರಿಗಳ, ಮೊದಲ ಸರಣಿಯನ್ನು, 30ನೇ ತಾರೀಖಿನ ವರೆಗೆ, ದೇಶದ 26 ವಿವಿಧ ಸ್ಥಳಗಳಲ್ಲಿ ಆಯೋಜಿಸಲಿದೆ. ಉದಯೋನ್ಮುಖ ಮತ್ತು ಯುವ ಸಂಗೀತ ಕಲಾವಿದರಿಗೆ, ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು, ಮತ್ತು ಶ್ರೋತೃಗಳನ್ನು ತಲುಪಲು, ಈ ಕಛೇರಿಗಳು, ವಿಶಿಷ್ಟ ರಾಷ್ಟ್ರೀಯ ವೇದಿಕೆಯನ್ನು ಕಲ್ಪಿಸಿಕೊಡಲಿವೆ. ಆಕಾಶವಾಣಿ 90; ವಾರ್ಷಿಕೋತ್ಸವದ ಹಿನ್ನೆಲೆ, ಯುವ ಪೀಳಿಗೆಯ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಹಾಗೂ ಪ್ರತಿಭೆ ಪೋಷಿಸುವ ಬದ್ಧತೆಯನ್ನು, ಈ ಕಾರ್ಯಕ್ರಮ ಬಿಂಬಿಸಲಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.